**ತುರ್ತು ಗಮನಕ್ಕೆ**

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಸಿ1(2) ಸ್ಥಾ.ಪ.ಬಡ್ತಿ–14/2011–12 ದಿನಾಂಕ: 16–05–2012

ಉಪನಿರ್ದೇಶಕರು (ಅಡಳಿತ)
ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳು

ಮಾನ್ಯರೇ,

ವಿಷಯ: ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಯಲ್ಲಿ ನಿಯಮ–32ರಡಿ ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಗ್ರೇಡ್–2 ಪ್ರೌಢಶಾಲಾ ಸಹ ಶಿಕ್ಷಕರಿಗೆ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಪತ್ರ ಸಮ ಸಂಖ್ಯೆ ದಿನಾಂಕ: 05–05–2012

–000–

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವಂತೆ 471 ಅರ್ಹ ಪ್ರೌಢಶಾಲಾ ಸಹಶಿಕ್ಷಕರುಗಳಿಗೆ ಗುಂಪು ಬಿ ವೃಂದದ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡುವ ಕುರಿತು ತಮ್ಮ ಜಿಲ್ಲಾ ವ್ಯಾಪ್ತಿಗೆ ಬರುವ ಶಿಕ್ಷಕರ ಪ್ರಸ್ತಾವನೆಯನ್ನು ದಿನಾಂಕ: **18–05–2012** ರಂದು ಖುದ್ದಾಗಿ ಸಲ್ಲಿಸಬೇಕಾಗಿರುವ ಅಂಶವನ್ನು ಮತ್ತೊಮ್ಮೆ ಜ್ಞಾಪಿಸಲಾಗಿದೆ. ಇದು ಕಾಲಮಿತಿಗೊಳಪಟ್ಟಿರುತ್ತದೆ. ಈ ತಿಂಗಳ ಕೊನೆಯ ವಾರದೊಳಗಾಗಿ ಈ ಪ್ರಕ್ರಿಯೆಯನ್ನು ಮುಗಿಸಬೇಕಾಗಿರುತ್ತದೆ. ಇದಕ್ಕೆ ತಮ್ಮ ಸಹಕಾರ ಅತೀ ಅವಶ್ಯವಿರುತ್ತದೆ. ಆದ್ದರಿಂದ ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮ ವ್ಯಾಪ್ತಿಗೆ ಬರುವ ಶಿಕ್ಷಕರ ಪ್ರಸ್ತಾವನೆಯನ್ನು ಇದರೊಂದಿಗೆ ಲಗತ್ತಿಸಿದ ಚೆಕ್‌ಲಿಸ್ಟ್‌ನಂತೆ ತಯಾರಿಸಿ ದಿನಾಂಕ: **18–05–2012** ರಂದು ಸಂಜೆ 5.30 ರೊಳಗೆ ತಪ್ಪದೆ ತಲುಪಿಸುವಂತೆ ಸಂಬಂಧಿಸಿದ ಕಾರ್ಯ ನಿರ್ವಾಹಕರನ್ನು ನಿಯೋಜಿಸುವುದು.

1. ಇತ್ತೀಚಿನ 5 ವರ್ಷಗಳ(2007–08 ರಿಂದ 2011–12ರವರೆಗಿನ) ಕಾರ್ಯ ನಿರ್ವಹಣಾ ವರದಿ ಹಾಗೂ ಕಾರ್ಯ ನಿರ್ವಹಣಾ ವರದಿ ಲಭ್ಯವಿಲ್ಲದ ವರ್ಷಕ್ಕೆ ಮಾತ್ರ ವಿಶೇಷ ವರದಿ (ಕಾರ್ಯ ನಿರ್ವಹಣಾ ವರದಿಗಳಲ್ಲಿ ವರದಿ ಮಾಡುವ, ಪರಿಶೀಲನಾ ಮತ್ತು ಅಂಗೀಕಾರ ಪ್ರಾಧಿಕಾರಿಗಳ ಷರಾ ಮತ್ತು ಸಹಿಗಳೊಂದಿಗೆ ಸಲ್ಲಿಸತಕ್ಕದ್ದು.) ಚೆಕ್‌ಲಿಸ್ಟ್‌ನಲ್ಲಿ ಯಾವ ವರ್ಷಕ್ಕೆ ನೀಡಿದೆ ಎಂದು ನಮೂದಿಸುವುದು.
2. ಕಾರ್ಯ ನಿರ್ವಹಣಾ ವರದಿ ಇಲ್ಲದಿದ್ದ ಪಕ್ಷದಲ್ಲಿ 5 ವರ್ಷಗಳ ವಿಶೇಷ ವರದಿಗೆ ಉಪನಿರ್ದೇಶಕರು ತಪ್ಪದೆ ಸಹಿ ಮಾಡಿರಬೇಕು. ಚೆಕ್‌ಲಿಸ್ಟ್‌ನಲ್ಲಿ ಯಾವ ವರ್ಷಕ್ಕೆ ನೀಡಿದೆ ಎಂದು ನಮೂದಿಸುವುದು.
3. ಶಿಸ್ತು ಕ್ರಮ ಬಾಕಿ ಇಲ್ಲವೆಂಬ ಬಗ್ಗೆ ನಿಗದಿತ ನಮೂನೆಯಲ್ಲಿ ಉಪನಿರ್ದೇಶಕರು ಸಹಿ ಮಾಡಿರಬೇಕು. ಉಪನಿರ್ದೇಶಕರ ಸಹಿ ಇರುವುದರ ಬಗ್ಗೆ ಖಚಿತಪಡಿಸಿಕೊಂಡು ಚೆಕ್‌ಲಿಸ್ಟ್‌ನಲ್ಲಿ ಸಂಬಂಧಿಸಿದ ಕಾಲಂನಲ್ಲಿ "ಇದೆ" ಎಂದು ಭರ್ತಿ ಮಾಡುವುದು.

4. ಇಲಾಖಾ ಪರೀಕ್ಷೆ ಉತ್ತೀರ್ಣರಾದ ಬಗ್ಗೆ ದೃಢೀಕರಿಸಿದ ಪ್ರಮಾಣ ಪತ್ರಗಳ ಪ್ರತಿಗಳು : ಕನ್ನಡ ಭಾಷಾ ವಿನಾಯ್ತಿ ಪತ್ರ ಹಾಗು ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರದ ಪ್ರತಿ ಅಥವಾ ಕನ್ನಡ ಪರೀಕ್ಷೆ ಉತ್ತೀರ್ಣರಾದ ಬಗ್ಗೆ ಕೆ.ಪಿ.ಎಸ್.ಸಿಯಿಂದ ನೀಡಿದ ಪ್ರಮಾಣ ಪತ್ರದ ಪ್ರತಿ ಲಗತ್ತಿಸಿರಬೇಕು.
5. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶಿಕ್ಷಕರಾಗಿದ್ದಲ್ಲಿ ದೃಢೀಕೃತ ಜಾತಿ ಪ್ರಮಾಣ ಪತ್ರ ಅಥವಾ ಸೇವಾಪುಸ್ತಕದ ದಾಖಲೆಯ ಪ್ರತಿಯನ್ನು ಲಗತ್ತಿಸಿರಬೇಕು.
6. ವಿದ್ಯಾರ್ಹತೆಯನ್ನು ಚೆಕ್‌ಲಿಸ್ಟ್‌ನಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು.
7. ಪ್ರತಿಯೊಬ್ಬ ಶಿಕ್ಷಕರ ಜ್ಯೇಷ್ಠತಾ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.
8. ಪ್ರತಿಯೊಬ್ಬ ಶಿಕ್ಷಕರ ಪ್ರಸ್ತಾವನೆಯನ್ನು ಒಂದು ಡೋಸಿಯರ್‌ನಲ್ಲಿ ತಯಾರಿಸಿ ಅದರ ಮೇಲ್ಭಾಗದಲ್ಲಿ ಈ ಪತ್ರದೊಂದಿಗೆ ಲಗತ್ತಿಸಿದ ಡೋಸಿಯರ್ ನಮೂನೆಯನ್ನು ಭರ್ತಿ ಮಾಡಿ ಸೇರಿಸಬೇಕು. ಅದರಲ್ಲಿ [ಪ್ರತಿಯೊಬ್ಬ ಶಿಕ್ಷಕರು ಸೇವೆಗೆ ಸೇರಿದ ದಿನಾಂಕದ ಮುಂದೆ ಗುತ್ತಿಗೆ ಅಥವಾ ನೇರ ನೇಮಕಾತಿ ಎಂಬುದನ್ನು ✓ ಗುರುತು ಹಾಕುವುದು ಹಾಗು ಸಹ ಶಿಕ್ಷಕರೇ ಅಥವಾ ನಿಯಮ–32 ರಡಿ ಮುಖ್ಯ ಶಿಕ್ಷಕರೇ ಎಂಬುದನ್ನು ✓ ಗುರುತು ಹಾಕುವುದು] ಡೋಸಿಯರ್ ನಮೂನೆಯ ಕೆಳಭಾಗದಲ್ಲಿ ಈ ಕಛೇರಿಯ ಅಧಿಕಾರಿ ಹಾಗೂ ಸಿಬ್ಬಂದಿಯವರು ಸಹಿ ಮಾಡಲು ಸ್ಥಳ ಬಿಡಲಾಗಿದೆ.
9. ಎಲ್ಲಾ ಪ್ರಸ್ತಾವನೆಗಳನ್ನು ಮತ್ತೊಮ್ಮೆ ಪರಿಶೀಲಿಸಿ ಇದರೊಂದಿಗೆ ಲಗತ್ತಿಸಿದ ಚೆಕ್‌ಲಿಸ್ಟ್‌ನಂತೆ ಎಲ್ಲಾ ಮಾಹಿತಿ ಇರುವುದನ್ನು ಖಚಿತಪಡಿಸಿಕೊಂಡು ಭರ್ತಿ ಮಾಡಿ ಎಲ್ಲಾ ಮಾಹಿತಿಗಳು ಸರಿ ಇರುವುದಾಗಿ ಕಾರ್ಯ ನಿರ್ವಾಹಕರು ದೃಢೀಕರಿಸಿ ನಿಗದಿತ ದಿನಾಂಕದೊಳಗೆ ಖುದ್ದಾಗಿ ಈ ಕಛೇರಿಯಲ್ಲಿ ಸಿಬ್ಬಂದಿ–1 ಶಾಖೆಯಲ್ಲಿ ಸಂಬಂಧಿಸಿದ ಅಧಿಕಾರಿ ಅಥವಾ ಸಿಬ್ಬಂದಿಗೆ ಸಲ್ಲಿಸುವುದು.

ಮುಂದುವರಿದು ಈಗಾಗಲೇ ಸಾಕಷ್ಟು ಬಾರಿ ದೂರವಾಣಿ ಮೂಲಕ ಈ ಹಿಂದೆ ಸ್ವೀಕರಿಸಿದ 243 ಶಿಕ್ಷಕರ ಪ್ರಸ್ತಾವನೆಯಲ್ಲಿನ ಕೆಲವು ಲೋಪದೋಷಗಳ ಬಗ್ಗೆ ಮಾಹಿತಿಯನ್ನು ಹಾಗು ಇತ್ತೀಚೆಗೆ ನೀಡಿದ ಉಪ ಜ್ಯೇಷ್ಠತಾ ಸಂಖ್ಯೆ ಹೊಂದಿರುವ ಶಿಕ್ಷಕರಿಗೆ ಸಂಬಂಧಿಸಿದಂತೆ ಹೊಸದಾಗಿ ಪ್ರಸ್ತಾವನೆಯನ್ನೂ ಸಹ ಈ ಮೇಲೆ ತಿಳಿಸಿರುವಂತೆ ದಿನಾಂಕ: **18–05–2012** ರೊಳಗೆ ತಲುಪಿಸುವುದು. ಒಂದು ವೇಳೆ ಸಂಬಂಧಿಸಿದ ಶಿಕ್ಷಕರೇ ಸಕಾಲದಲ್ಲಿ ಮಾಹಿತಿಯನ್ನು ನೀಡದೇ ಇದ್ದಲ್ಲಿ ಅವರಿಗೆ ಸೂಕ್ತ ತಿಳುವಳಿಕೆ / ನೋಟೀಸು ನೀಡಿ ಅದನ್ನು ಲಿಖಿತವಾಗಿ ಅವರ ಹೆಸರಿನ ಮುಂದೆ ದಾಖಲಿಸಿ ಸಲ್ಲಿಸುವುದು.

ತಮ್ಮ ನಂಬುಗೆಯ

16/5/12

[ವಿ.ಜಿ.ದಿವಾಕರ್]

ಅಪರ ಆಯುಕ್ತರು [ಆಡಳಿತ]

16/5/12

ಪ್ರತಿಯನ್ನು .ಉಪನಿರ್ದೇಶಕರು (ಅಭಿವೃದ್ಧಿ) ಹಾಗು ಪದನಿಮಿತ್ತ ಪ್ರಾಂಶುಪಾಲರು ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು ಇವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

| ಗ್ರೇಡ್–2 ಸಂಖ್ಯೆ | | | |
|---|---|---|---|
| ಪ್ರವರ್ಗ | ಸಾಮಾನ್ಯ | ಪ.ಜಾತಿ | ಪ.ಪಂಗಡ |

1. ಹೆಸರು :

2. ಹುದ್ದೆ :

| ಸಹ ಶಿಕ್ಷಕರು | ನಿ–32 ಮುಖ್ಯ ಶಿಕ್ಷಕರು |
|---|---|

[ಹಿಂದಿ ಶಿಕ್ಷಕರಾಗಿದ್ದಲ್ಲಿ ಸ್ಪಷ್ಟ ಮಾಹಿತಿ]

3. ಜನ್ಮ ದಿನಾಂಕ :

4. ಸೇವೆಗೆ ಸೇರಿದ ದಿನಾಂಕ :

| ಗುತ್ತಿಗೆ | ನೇರ ನೇಮಕಾತಿ |
|---|---|

5. ಸೇವೆ ಸಕ್ರಮಗೊಂಡ ದಿನಾಂಕ :

6. ಲಭ್ಯವಿರುವ ಕಾರ್ಯ ನಿರ್ವಹಣಾ ವರದಿಗಳು / ವಿಶೇಷ ವರದಿಗಳ ವಿವರ

| ಕ್ರ. ಸಂ | ವರ್ಷ | ಕಾರ್ಯ ನಿರ್ವಹಣಾ ವರದಿ | ವಿಶೇಷ ವರದಿ | ಕಾ.ನಿ.ವರದಿಯಲ್ಲಿ ವ್ಯತಿರಿಕ್ತ ಷರಾ | | ಶಿಸ್ತು ಕ್ರಮ / ವಿಚಾರಣೆ | |
|---|---|---|---|---|---|---|---|
| | | | | ಇದೆ | ಇಲ್ಲ | ಇದೆ | ಇಲ್ಲ |
| 1 | 2007–08 | | | | | | |
| 2 | 2008–09 | | | | | | |
| 3 | 2009–10 | | | | | | |
| 4 | 2010–11 | | | | | | |
| 5 | 2011–12 | | | | | | |

7. ಷರಾ :

ಆಯುಕ್ತರ ಕಛೇರಿಯ

ಕಾರ್ಯ ನಿರ್ವಾಹಕರ ಸಹಿ        ಅಧೀಕ್ಷಕರ ಸಹಿ        ಶಾಖಾಧಿಕಾರಿಗಳ ಸಹಿ

ಪ್ರಸ್ತಾವನೆ ಸಲ್ಲಿಸುವಾಗ ಭರ್ತಿ ಮಾಡಬೇಕಾದ ಮಾಹಿತಿ (ಚಕ್ ಲಿಸ್ಟ್)    ಜಿಲ್ಲೆ——————————

| ಕ್ರ.ಸಂ | ಜೇ.ಸಂ | ಹೆಸರು | ನಮೂನೆ–1 ಭರ್ತಿಮಾಡಿ | ವಿದ್ಯಾರ್ಹತೆ | ಯಾವ ಅವಧಿಗೆ ಕಾ.ನಿ.ವ ನೀಡಲಾಗಿದೆ | ಯಾವ ಅವಧಿಗೆ ವಿಶೇಷ ವರದಿ ನೀಡಲಾಗಿದೆ | ಶಿಸ್ತು ಕ್ರಮ ಬಾಕಿ ಇರುವುದಿಲ್ಲ ಎಂಬ ಬಗ್ಗೆ ಉಪನಿರ್ದೇಶಕ ರಿಂದ ದೃಢೀಕರಣ | 1. ಅಕೌಂಟ್ಸ್ ಹೈಯರ್<br>2 .ಜನರಲ್ ಲಾ ಪಾರ್ಟ್–1<br>3..ಕನ್ನಡ ನಾಯಿತಿ<br>4.ಎಸ್.ಎಸ್.ಎಲ್.ಸಿ ಅಥವಾ ಕೆಪಿಎಸ್‌ಸಿ | ಜಾತಿ ಪ್ರಮಾಣ ಪತ್ರ ಪ.ಜಾತಿ ಮತ್ತು ಪ..ಪಂಗಡ ದ ಶಿಕ್ಷಕರಿಗೆ | ಷರಾ |
|---|---|---|---|---|---|---|---|---|---|---|
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |